ಅ.ದಾ. ನಂ.376/2009

ಡಿ.ಡಬ್ಲ್ಯೂ-2

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 18-02-2020

**ಪಾಟೀ ಸವಾಲುಃ-** ಶ್ರೀ ಎಸ್.ಜಿ ವಕೀಲರಿಂದ (3 ಮತ್ತು 4 ನೇ ಪ್ರತಿವಾದಿ ಪರ)

ನನ್ನ ತಂದೆ ರಂಗಪ್ಪನವರಿಗೆ 4 ಹೆಣ್ಣು, 2 ಗಂಡು ಮಕ್ಕಳು. ನನ್ನ ತಂದೆ ತೀರಿಕೊಂಡು 18-19 ವರ್ಷಗಳಾಗಿದೆ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ತಾಯಿ ಜಯಮ್ಮ ತೀರಿಕೊಂಡು 12 ವರ್ಷಗಳಾಗಿದೆ, ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ನನ್ನ ತಂದೆ ಪೌತಿಯಾದ ನಂತರ ಮನೆಯ ವ್ಯವಹಾರಗಳನ್ನು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು. ಅಲ್ಲಿಯವರೆಗೂ ಒಟ್ಟು ಕುಟುಂಬದಲ್ಲಿರಲಿಲ್ಲ. 1995 ರಲ್ಲಿಯೇ ಪಂಚಾಯ್ತಿ ಪಾಲುಪಟ್ಟಿ ಮೂಲಕ 2 ವಿಭಾಗ ಮಾಡಿಕೊಂಡಿರುತ್ತೇವೆ. ವಿಭಾಗ ಮಾಡಿಕೊಂಡಾಗ ನನ್ನ ತಂದೆ ಬದುಕಿದ್ದರು. ನನ್ನ ತಂದೆಗೆ ಯಾವುದೇ ಹಿಸ್ಸೆ ನೀಡಿರಲಿಲ್ಲ. ನಾನು ಮತ್ತು ಪ್ರತಿವಾದಿ 1,2 ವಿಭಾಗ ಮಾಡಿಕೊಂಡಿರುತ್ತೇವೆ. ನನ್ನ ತಂದೆಗೆ ಬೇರೆ ಜಮೀನಿತ್ತು. ನಮ್ಮ ಕುಟುಂಬದ ಎಲ್ಲಾ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು.

ವಿಭಾಗ ಮಾಡಿಕೊಂಡ ದಿನಾಂಕ, ತಿಂಗಳು ನೆನಪಿಲ್ಲ. ಪಾಲುಪಟ್ಟಿಯನ್ನು ನೋಂದಣಿ ಮಾಡಿಸಿಲ್ಲ. ಹೆಣ್ಣು ಮಕ್ಕಳು ಪಂಚಾಯ್ತಿ ಪಾಲುಪಟ್ಟಿಗೆ ಸಹಿ ಮಾಡಿಲ್ಲ. ಪಂಚಾಯ್ತಿ ಪಾಲುಪಟ್ಟಿಯಲ್ಲಿ ಬಿ ಷೆಡ್ಯೂಲ್ ಸ್ವತ್ತುಗಳನ್ನು ಸೇರಿಸಿದ್ದೇವೆ. ಬಿ ಷೆಡ್ಯೂಲ್ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಅವರು ಯಾರಿಂದ ಕ್ರಯಕ್ಕೆ ಪಡೆದಿದ್ದಾರೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಡಿ-12 ರಂತೆ ಮನೆಗಳನ್ನು ಮಾತ್ರ ನನ್ನ ಮತ್ತು 1 ನೇ ಪ್ರತಿವಾದಿ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇವೆ, ಜಮೀನುಗಳನ್ನು ಖಾತೆ ಮಾಡಿಸಿಕೊಂಡಿಲ್ಲ. ನಿಡಿ-12 ರಲ್ಲಿ ಮನೆಗಳನ್ನು ಹೊರುತಪಡಿಸಿ ಜಮೀನುಗಳ ಒಕ್ಕಣೆಯನ್ನು ಸಹ ಬರೆಯಲಾಗಿದೆ. 1997 ರಲ್ಲಿ ಸ.ನಂ. 211 ರಲ್ಲಿ 3 ಎಕರೆ ಜಮೀನನ್ನು ಒಟ್ಟು ಕುಟುಂಬದಲ್ಲಿ ಸಾಗುವಳಿ ಮಾಡುತ್ತಿದ್ದರಿಂದ ನನ್ನ ಹೆಸರಿಗೆ ಒಟ್ಟು

ಕುಟುಂಬದ ಪರವಾಗಿ ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಹಣವನ್ನು ಈ ಸ್ವತ್ತಿಗೆ ವ್ಯಯ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಷೆಢ್ಯೂಲ್ ಎ, ಐಟಂ ನಂ.3 ರಲ್ಲಿ ಸ.ನಂ.211, ಹೊಸ ಸ.ನಂ. 221 ರಲ್ಲಿನ 3 ಎಕರೆ ಸ್ವತ್ತು ನನ್ನ ಪಿತ್ರಾರ್ಜಿತ ಸ್ವತ್ತಾಗಿದ್ದು, ಅದರಲ್ಲಿ ವಾದಿಗೆ ಹಿಸ್ಸಾ ಹಕ್ಕು ಇರುವುದಿಲ್ಲ ಎಂದು ಬರೆಸಿಲ್ಲ. ದಾವಾ ಐಟಂ ನಂ.4 ನ್ನು ನನ್ನ ತಂದೆ ಬದುಕಿದ್ದಾಗ ನನ್ನ ತಾಯಿಯ ಹೆಸರಿಗೆ ಕುಟುಂಬದ ಹಣದಿಂದ ಕ್ರಯಕ್ಕೆ ಬರೆಸಲಾಗಿದೆ ಎಂದರೆ ಸರಿಯಲ್ಲ.

ದಿಃ 25-06-1994 ರ ಪಂಚಾಯ್ತಿ ಪಾಲುಪಟ್ಟಿಗೆ ವಾದಿ, ಪ್ರತಿವಾದಿ 3 ರಿಂದ 5, ನನ್ನ ತಾಯಿಯ ಸಹಿಯನ್ನು ಪಡೆದಿಲ್ಲ. ಸದರಿ ಪಾಲುಪಟ್ಟಿಯನ್ನು ನನ್ನ ತಂದೆ ಬರೆಯುವ ಕಾಲಕ್ಕೆ ನಾವು ಇರಲಿಲ್ಲ, ನನ್ನ ತಂದೆ ಸ್ವತಃ ಬರೆದು ನಮಗೆ ಪಾಲು ನೀಡಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. 1994 ರ ಪಾಲುಪಟ್ಟಿಯಂತೆ 1 ನೇ ಪ್ರತಿವಾದಿಗೆ ಮನೆಗಳನ್ನು ಮಾತ್ರ ಪಾಲು ನೀಡಿದ್ದಾರೆ . ನನಗೆ ಮತ್ತು ಮನೆಗಳು ಮತ್ತು ಜಮೀನುಗಳನ್ನು ನೀಡಿದ್ದಾರೆ, ಅದರಲ್ಲಿ ಮನೆಗಳನ್ನು ಮಾತ್ರ ಖಾತೆ ಮಾಡಿಸಿಕೊಂಡಿದ್ದೇನೆ. ನಿಡಿ-12 ಮತ್ತು 13 ರಲ್ಲಿರುವ ಒಕ್ಕಣೆಯು ಕಪ್ಪು ಮತ್ತು ನೀಲಿ 2 ಬೇರೆ ಬೇರೆ ಶಾಹಿಗಳಲ್ಲಿ ಬರೆಯಲಾಗಿದೆ ಎಂದರೆ ಸರಿ. ನಿಡಿ-1 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ನಿಡಿ-1 ಕ್ಕೆ ವಾದಿಯರು ಮತ್ತು ಇತರ ಪ್ರತಿವಾದಿಗಳು ಸಹಿ ಮಾಡಿಲ್ಲ ಎಂದರೆ ಸರಿ, ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ನನ್ನ ತಾಯಿಯೊಂದಿಗೆ ಷರೀಕಾಗಿ ನಿಡಿ-1 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಿಡಿ-3 ನ್ನು ಯಾವ ಸಾಲಿನಲ್ಲಿ ಬರೆಯಲಾಗಿದೆ ನನಗೆ ಗೊತ್ತಿಲ್ಲ. ನನ್ನ ತಾಯಿ ತೀರಿಕೊಂಡ ನಂತರ ನಿಡಿ-3 ರ ವಿಚಾರ ನನಗೆ ತಿಳಿದಿರುತ್ತದೆ. ನಿಡಿ-3 ರಲ್ಲಿರುವ ಸ್ವತ್ತು ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸ.ನಂ.128 ರಲ್ಲಿ 4 ಎಕರೆಯನ್ನು ನನ್ನ ತಾಯಿ ರಾಮಣ್ಣರವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ, ಆಗ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ಈ ಆಸ್ತಿಯನ್ನು ನನ್ನ ತಂದೆ ಒಟ್ಟು ಕುಟುಂಬದ ಆದಾಯದಿಂದ ನನ್ನ ತಾಯಿಯ ಹೆಸರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸ.ನಂ.128 ರಲ್ಲಿ 4 ಎಕರೆ ಸ್ವತ್ತು ನನ್ನ ತಾಯಿಯ ಹೆಸರಿನಲ್ಲಿ ಪಹಣಿ ಇದ್ದುದರಿಂದ ವಾದಿ ಮತ್ತು ಪ್ರತಿವಾದಿ 3 ರಿಂದ 5 ರವರಿಗೆ ಮೋಸ ಮಾಡುವ ಉದ್ದೇಶದಿಂದ 6ನೇ ಪ್ರತಿವಾದಿಗೆ ಮಾರಾಟ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ಮಂಜೂರಾಗಿರುವ ಗ್ರ್ಯಾಂಟ್ ಸರ್ಟಿಫಿಕೇಟನ್ನು ನಾನು ಓದಿ ತಿಳಿದುಕೊಂಡಿಲ್ಲ. ಸದರಿ ಗ್ರ್ಯಾಂಟ್ ಸರ್ಟಿಫಿಕೇಟ್ನಲ್ಲಿ ಒಟ್ಟು ಕುಟುಂಬಕ್ಕೆ ಮಂಜೂರಾಗಿದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಿಡಿ-12 ಮತ್ತು 13ನ್ನು ಹೆಣ್ಣು ಮಕ್ಕಳಿಗೆ ಹಿಸ್ಸೆ ನೀಡಬೇಕಾಗುತ್ತದೆ ಎಂದು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಪ್ರತಿವಾದಿ 3 ರಿಂದ 5 ರವರಿಗೆ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ